# ಭಾರತೀಯ ಜನತಾ ಪಾರ್ಟಿ
# (ಕೇಂದ್ರ ಕಚೇರಿ)
# 11, ಅಶೋಕ ರಸ್ತೆ, ನವದೆಹಲಿ-110001

Tel. No. : 23005700; Fax : 23005787

ದಿನಾಂಕ: ಮೇ 02,2013

**<u>ಭಾಜಪ ರಾಷ್ಟ್ರೀಯ ಅಧ್ಯಕ್ಷ ಶ್ರೀ ರಾಜನಾಥ್ ಸಿಂಗ್ ಪತ್ರಿಕಾ ಪ್ರಕಟಣೆ</u>**

ಸರಬ್ಜಿತ್ ಹತ್ಯೆ ಒಂದು ಪೂರ್ವನಿಯೋಜಿತ ಸಂಚು ಎಂದು ವ್ಯಾಖ್ಯಾನಿಸಿದ ಭಾಜಪ ರಾಷ್ಟ್ರೀಯ ಅಧ್ಯಕ್ಷ ಶ್ರೀ ರಾಜನಾಥ್ ಸಿಂಗ್ ಅವರು, "ಪ್ರಸ್ತುತ, ಪಾಕಿಸ್ತಾನದ ಭಾರತೀಯ ರಾಯಭಾರಿಯನ್ನು ಸ್ವದೇಶಕ್ಕೆ ವಾಪಸ್ ಕರೆಸಿಕೊಳ್ಳಬೇಕು," ಎಂದಿದ್ದಾರೆ.

ಪಾಕಿಸ್ತಾನದಲ್ಲಿ, ಭಾರತ ವಿರೋಧಿ ಕೃತ್ಯಗಳನ್ನು ಎಸಗಿರುವುದರಿಂದ, ಭಾರತ ಸರ್ಕಾರ ಅಂತಾರಾಷ್ಟ್ರೀಯ ಒತ್ತಡವನ್ನು ಅದರ ವಿರುದ್ಧ ಹೇರಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಶ್ರೀ ರಾಜನಾಥ್ ಸಿಂಗ್ ಇಂದು ತಿಳಿಸಿದ್ದಾರೆ. ಸರಬ್ಜಿತ್ ಹತ್ಯೆಯನ್ನು ರಾಜತಾಂತ್ರಿಕ ವೈಫಲ್ಯವೆಂದು ತಿಳಿಸಿರುವ ಅವರು, "ಪಾಕಿಸ್ತಾನ ತನ್ನ ನೆಲೆಯಿಂದ ಭಯೋತ್ಪಾದಕ ಧಾಳಿ ನಿಲ್ಲಿಸುವವರೆಗೂ ಪಾಕಿಸ್ತಾನದೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ತಗ್ಗಿಸಬೇಕು", ಎಂದು ಸೂಚಿಸಿದರು.

ಗಡಿ ರೇಖೆ ಸಮೀಪ ಇಬ್ಬರು ಭಾರತೀಯ ಸೈನಿಕರ ಶಿರಚ್ಛೇದನ ಮಾಡಿದ ಪ್ರಕರಣದ ನಂತರ ಸರ್ಕಾರ ಬಲವಾದ ನಿಲುವನ್ನು ತೆಗೆದುಕೊಂಡಿದ್ದರೆ, ಸರಬ್ಜಿತ್ ಪ್ರಕರಣ ನಡೆಯುತ್ತಿರಲಿಲ್ಲವೆಂದು ಶ್ರೀ ಸಿಂಗ್ ತಿಳಿಸಿದರು.

ಆಗಿನ ಘಟನೆ ಆದಾಗಲೇ, ಭಾರತೀಯ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಬೇಡಿಕೆಯನ್ನು ಭಾಜಪ ಮಾಡಿತ್ತು. ಆದರೆ ಸರ್ಕಾರ ಅದರ ಮಾತಿಗೆ ಕಿವಿಗೊಡಲಿಲ್ಲ. ಭಾರತದ ಅನ್ಯ ಸೆರೆವಾಸಿಗಳ ಸುರಕ್ಷತೆ ದೃಷ್ಟಿಯಿಂದ ಪಾಕಿಸ್ತಾನದ ಮೇಲೆ ಒತ್ತಡ ಹೇರಲು ರಾಜತಾಂತ್ರಿಕ ಕ್ರಮಗಳನ್ನು ತೆಗೆದುಕೊಳ್ಳಬೇಕು.

"ರಾಷ್ಟ್ರೀಯ ಹಿತ ಕಾಪಾಡುವ ದೃಷ್ಟಿಯಿಂದ ಪ್ರಭಾವಿ ಪರಿಹಾರ ಹುಡುಕುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ತಮ್ಮ ರಾಜತಾಂತ್ರಿಕ ವೈಫಲ್ಯಗಳನ್ನು ಮರೆಮಾಚಲು ದುರ್ಬಲ ಹೇಳಿಕೆಗಳನ್ನು ನೀಡುತ್ತಿದೆ. ಸರಬ್ಜಿತ್ ಕುಟುಂಬಕ್ಕೆ ಅಗತ್ಯ ಬೆಂಬಲ, ಪರಿಹಾರ ಮತ್ತು ನೆರವು ನೀಡಬೇಕೆಂದು ಶ್ರೀ ರಾಜನಾಥ್ ಸಿಂಗ್ ಆಗ್ರಹಿಸಿದ್ದಾರೆ.

(ಓಂ ಪ್ರಕಾಶ್ ಕ್ಹೊಲಿ)
ಮುಖ್ಯ ಕಚೇರಿ ಪ್ರಭಾರಿ